ಅಧ್ಯಕ್ಷರು.—ಕ್ವಶ್ಚನ್ ಅವರ್ ಮುಂಗಿದಿದೆ. ಆದರೂ ನಿಮಗೆ ಅವಕಾಶ ಕೊಟ್ಟಿದ್ದೇನೆ.

ಶ್ರೀ ಪಿ. ಎಸ್. ರಾಣೆ.—ಗೌರ್ನಿಂಗ್ ಕೌನ್ಸಿಲ್‌ನವರು ಯಾವುದೇ ಕ್ರಮ ಕೈಗೊಳ್ಳದೇ ಇರುವುದು ನಿಮ್ಮ ಗಮನಕ್ಕೆ ಬಂದಿದ್ದರೆ ಇದನ್ನು ಸಂಜಯಗಾಂಧಿ ಅಪಘಾತ ಮತ್ತು ಪುನರ್‌ವಸತಿ ಕೇಂದ್ರಕ್ಕೆ ಜೋಡಿಸುವ ಬದಲು ಇದನ್ನೇ ಒಂದು ಬೇರೆ ಸಂಸ್ಥೆಯಾಗಿ ಮಾಡಿ ಇದಕ್ಕೆ ಸರ್ಕಾರದವರು ಸಾಕಷ್ಟು ಅನುದಾನವನ್ನು ಅಥವಾ ಹಣಕಾಸಿನ ಸಹಾಯವನ್ನು ಕೊಟ್ಟು ಈ ಸೌಲಭ್ಯ ರಾಜ್ಯದ ರೋಗಿಗಳಿಗೆ ಸಿಗುವಂತೆ ಏರ್ಪಾಡು ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಅದನ್ನು ಪರಿಶೀಲಿಸುತ್ತೇನೆ ಸ್ವಾಮಿ.

ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಉಪನ್ಯಾಸಕರ ಸಹಾಯಕ ಪ್ರಾಧ್ಯಾಪಕರ ಬಗ್ಗೆ

೬೧೮. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಉಪನ್ಯಾಸಕರ : ಸಹಾಯಕ ಪ್ರಾಧ್ಯಾಪಕರ ಸಂಖ್ಯೆ.

ಆ) ಇವರಲ್ಲಿ ಸೇನಾ ತುಕಡಿಯಲ್ಲಿ ಕೆಲಸ ಮಾಡಿರುವವರ ಸಂಖ್ಯೆ.

ಇ) ಇವರಿಗೆ ಪದೋನ್ನತಿ ನೀಡಲಾಗಿದೆಯೇ ? ಹಾಗಿದ್ದಲ್ಲಿ ಅಂಥ ಅಧಿಕಾರಿಗಳ ಹೆಸರುಗಳು.

ಈ) ಸೇನಾ ತುಕಡಿಯಲ್ಲಿ ಕೆಲಸ ಮಾಡಿರುವ ಅಧಿಕಾರಿಗಳಿಂದ ಪದೋನ್ನತಿಗಾಗಿ ಬೇಡಿಕೆ ಸಲ್ಲಿಸಿರುವ ಅರ್ಜಿಗಳು ಸರ್ಕಾರದ ಮುಂದಿದೆಯೇ ? ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದ ಕಾರ್ಯ ನೀತಿ.

ಶ್ರೀ ಬಿ. ರಾಚಯ್ಯ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—

ಅ) ಉಪನ್ಯಾಸಕರು ... ೨೧೭
ಸಹಾಯಕ ಪ್ರಾಧ್ಯಾಪಕರು ... ೧೪೭

ಆ) ಉಪನ್ಯಾಸಕರು ... ೩
ಸಹಾಯಕ ಪ್ರಾಧ್ಯಾಪಕರು ... ೬

ಇ) ಉಪನ್ಯಾಸಕರು —ಪದೋನ್ನತಿ ನೀಡಿರುವುದಿಲ್ಲ.
ಸಹಾಯಕ ಪ್ರಾಧ್ಯಾಪಕರು

ಇಬ್ಬರು ಸೇನಾ ತುಕಡಿಯಲ್ಲಿ ಕೆಲಸ ಮಾಡಿರುವ ಅಧಿಕಾರಿಗಳಿಗೆ ಪ್ರಾಧ್ಯಾಪಕರಾಗಿ ಪದೋನ್ನತಿ ನೀಡಲಾಗಿದೆ.

೧) ಡಾ. ಜಿ. ಎಸ್. ವೆಂಕಟೇಶ್‌ರವರಿಗೆ ೨-೧-೧೯೮೫ರಂದು ವೈದ್ಯಶಾಸ್ತ್ರದ ಪ್ರಾಧ್ಯಾಪಕರಾಗಿ ಮುಂಬಡ್ತಿ ನೀಡಿದೆ.

೨) ಡಾ. ವೈ. ಎಸ್. ಜಯಲಕ್ಷ್ಮಿ ಎಂಬುವರಿಗೆ ರೋಗಲಕ್ಷಣ ಶಾಸ್ತ್ರದ ಪ್ರಾಧ್ಯಾಪಕರಾಗಿ ಜುಲೈ ೧೯೮೭ರಲ್ಲಿ ಪದೋನ್ನತಿ ನೀಡಿದೆ.

ಈ) ಉಪನ್ಯಾಸಕರು :

ಡಾ : ಸಾಯಿಪ್ರಸಾದ್, ಶಸ್ತ್ರಚಿಕಿತ್ಸಾ ಶಾಸ್ತ್ರದ ಉಪನ್ಯಾಸಕರು ಪದೋನ್ನತಿಗಾಗಿ ಬೇಡಿಕೆ ಸಲ್ಲಿಸಿದ್ದಾರೆ. ಆದರೆ ಜೇಷ್ಠತೆ ಪಟ್ಟಿಯ ಪ್ರಕಾರ ಇವರಿಗಿಂತ ಮೇಲಿರುವ ಅಧಿಕಾರಿಗಳು ಪದೋನ್ನತಿಗೆ

ಅರ್ಹರಾಗಿರುವುದರಿಂದಲೂ ಅಲ್ಲದೆ ಸಾಕಷ್ಟು ಪ್ರಮಾಣದಲ್ಲಿ ಖಾಲಿ ಹುದ್ದೆಗಳು ಪದೋನ್ನತಿ ನೀಡಲಂ ಇಲ್ಲದಿರುವುದರಿಂದಲೂ, ಇವರಿಗೆ ನೀಡಲು ಸಾಧ್ಯವಾಗಿಲ್ಲ.

ಸಹಾಯಕ ಪ್ರಾಧ್ಯಾಪಕರುಗಳಲ್ಲಿ ಸೇನೆಯಲ್ಲಿ ಸೇವೆ ಸಲ್ಲಿಸಿರುವವರ ಪೈಕಿ ಪದೋನ್ನತಿಗಾಗಿ ಯಾರೂ ಬೇಡಿಕೆ ಸಲ್ಲಿಸಿರುವುದಿಲ್ಲ.

ಈ ವಿಷಯದಲ್ಲಿ ಸರ್ಕಾರದ ಕಾರ್ಯ ನೀತಿ.

ಉಪನ್ಯಾಸಕರ ಮತ್ತು ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ನೇರ ನೇಮಕಾತಿಯಿಂದ ಭರ್ತಿ ಮಾಡುವ ಸಂದರ್ಭದಲ್ಲಿ ಶೇಕಡ ೧೦ರಷ್ಟು ಹುದ್ದೆಗಳನ್ನು ಸೇನಾ ತುಕಡಿಯಲ್ಲಿ ಸೇವೆ ಸಲ್ಲಿಸಿದವರಿಗೆ ಮೀಸಲಾಗಿರಿಸಿದೆ.

ಪದೋನ್ನತಿಯಲ್ಲಿ ಮೀಸಲಾಗಿರಿಸಿರುವ ಹುದ್ದೆಗಳಲ್ಲೂ ಸಹ ಇವರಿಗೆ ಭೋದಕ ಅನುಭವದ ಪರಿಮಿತಿಯಲ್ಲಿ ರಿಯಾಯಿತಿ ಕೊಡಲ್ಪಟ್ಟಿದೆ. ಆದರೆ ಈ ರಿಯಾಯಿತಿಯು, ಸೇನಾ ತುಕಡಿಯಲ್ಲಿ ಕೆಲಸ ಮಾಡಿರುವ : ಪ್ರತಿ ನಿಯೋಜನೆಯ ಮೇರೆಗೆ ಸೇನಾ ತುಕಡಿಯಲ್ಲಿ ಕೆಲಸ ಮಾಡುತ್ತಿರುವವರು ಪದೋನ್ನತಿಗೆ ಬೇರೆ ಎಲ್ಲಾ ವಿಧದಲ್ಲಿ ಅರ್ಹರಿದ್ದರೆ, ಬೋಧಕ ಅನುಭವವನ್ನು ಮನ್ನಾ ಮಾಡಲು ಅವಕಾಶವಿದೆ. ಆದರೆ ಈ ರಿಯಾಯಿತಿಯು ಸರ್ಕಾರಿ ನೌಕರರು ಸೇನಾ ತುಕಡಿಯಲ್ಲಿ ಸೇವೆ ಸಲ್ಲಿಸಿರುವ ಅವಧಿಗೆ ಮಿತಿಗೊಳಿಸಬೇಕಾಗಿದೆ. ರಿಯಾಯಿತಿಯು ಸೇನಾ ತುಕಡಿಯಲ್ಲಿ ಕೆಲಸ ಮಾಡಿರುವ ಅಧಿಕಾರಿಗಳನ್ನೇದು ಪರಿಮಿತವಾಗಿ ಇತರ ವರ್ಗದ ಅಧಿಕಾರಿಗಳಿಗೂ ಇರುವುದಿಲ್ಲ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ —ಲೆಕ್ಚರರ್ಸ್‌ಗೆ ಪ್ರಮೋಷನ್ ಅನ್ನು ಕೊಡುವುದಕ್ಕೆ ಆಗುವುದಿಲ್ಲ ಅಂತ ಮಾನ್ಯ ಮಂತ್ರಿಗಳು ಹೇಳಿದ್ದಾರೆ ಯಾರಿಗೂ ಕೊಟ್ಟಿಲ್ಲವೆ ಇಲ್ಲಿಯವರೆಗೂ ಡೈರೆಕ್ಟ್ ರಿಕ್ರೂಟ್‌ಮೆಂಟ್ ೧೦ ಪರ್ಸೆಂಟ್ ಅಂತ ಹೇಳಿದ್ದೀರಲ್ಲಾ, ಆ ೧೦ ಪರ್ಸೆಂಟ್‌ನಲ್ಲಿ ಇವರು ಬರುವುದಿಲ್ಲವೇ ? ಕೆಲವು ಸೌಲಭ್ಯಗಳನ್ನು ಇವರಿಗೆ ಕೊಟ್ಟಿರುವಾಗ, ಪ್ರಮೋಷನ್‌ನಲ್ಲಿ ಏಕೆ ಆ ಒಂದು ಸವಲತ್ತನ್ನು ಕೊಟ್ಟಿಲ್ಲ ? ಇಷ್ಟೇ ವರ್ಷ ಸೇವೆ ಮಾಡಿರಬೇಕೆಂಬುದರ ಬಗ್ಗೆ ನಿಯಮ ಏನಾದರು ಇದೆಯೇ ?

ಶ್ರೀ ಬಿ. ರಾಚಯ್ಯ.— ೧೦ ಪರ್ಸೆಂಟ್‌ನೊಳಗೇ ಇವರು ಬರುತ್ತಾರೆ. ಆ ರೀತಿ ಬರುವಾಗ ಕೇವು ಕಡೆ ನಮಗೆ ಪದೋನ್ನತಿ ಬೇಕು ಅಂತ ಕೇಳಲೇ ಇಲ್ಲ ಅಂತ ಮೊದಲೇ ಹೇಳಿದ್ದೇನೆ. ಈ ಸಾರಿ ಪುನರ್‌ವಿಮರ್ಶೆ ಮಾಡತಕ್ಕ ಸಂದರ್ಭದಲ್ಲಿ ಈ ೧೦ ಪರ್ಸೆಂಟ್‌ನಲ್ಲಿ ಕೊಡುವುದಕ್ಕೆ ಸಾಧ್ಯವಿದ್ದರೆ, ಕೊಡುವ ವ್ಯವಸ್ಥೆ ಮಾಡುತ್ತೇನೆ.

ಅಧ್ಯಕ್ಷರು.—ಶ್ರೀಮಾನ್ ಬಿ. ಆರ್. ನೀಲಕಂಠಪ್ಪನವರೆ, ನಿಮ್ಮ ಪ್ರಶ್ನೆಯನ್ನು ಮುಂದಕ್ಕೆ ಹಾಕಲಾಗಿದೆ.

ಶ್ರೀ ಬಿ. ಆರ್. ನೀಲಕಂಠಪ್ಪ.—ಇದು ಇಂಪಾರ್ಟೆಂಟ್ ಕೊಶ್ಚನ್. ಮುಂದಕ್ಕೆ ಹಾಕಲಾಗಿದೆ ಎಂದರೆ ಶುಕ್ರವಾರ ಸದನ ಮುಗಿದು ಹೋಗುತ್ತದೆ. ಯಾವಾಗ ನನ್ನ ಪ್ರಶ್ನೆಗೆ ಉತ್ತರ ಸಿಕ್ಕುವುದು ? ಅಬ್ಯಾರಿಯಿಂದ ರಾಜ್ಯದ ಬೊಕ್ಕಸಕ್ಕೆ ತೊಂದರೆಯಾಗಿದೆ. ಇದನ್ನು ಅರ್ಧ ಗಂಟೆ ಚರ್ಚೆಯಾಗಿ ಪರಿವರ್ತನೆ ಮಾಡಿ. ನಾಳೆಯಾದರೂ ತೆಗೆದುಕೊಳ್ಳಿ.

ಅಧ್ಯಕ್ಷರು.—ಏನು ಮಾಡುವುದಕ್ಕಾಗುವುದಿಲ್ಲ. ಮಂತ್ರಿಗಳು ಟೈಮ್ ಕೇಳಿದ್ದಾರೆ. ಟೈಮನ್ನು ಕೊಟ್ಟಿದ್ದೇನೆ.

ಶ್ರೀ ಬಿ. ಆರ್. ನೀಲಕಂಠಪ್ಪ.—ಸದನ ಶುಕ್ರವಾರ ಮುಗಿದು ಹೋಗುತ್ತದೆ.....

ಅಧ್ಯಕ್ಷರು.—ಆಯಿತು. ನಿಮಗೆ ಉತ್ತರ ಕೊಡಿಸುತ್ತೇನೆ.

ಶ್ರೀ ಪಟಮಕ್ಕಿ ರತ್ನಾಕರ್.—ಮುಂದೆ ಹಾಕುವಂತಹ ಪ್ರಸಂಗ ಏನು ಇದೆ ? ಮುಂದೆ ನಮಗೆ ಅವಕಾಶವೇ ಸಿಕ್ಕುವುದಿಲ್ಲ. ಮುಂದಕ್ಕೆ ಹಾಕತಕ್ಕ ಉದ್ದೇಶ ಏನಿದೆ ? ಅಂತಹ ನಿಗೂಢತೆ ಇದರಲ್ಲಿ ಏನು ಇದೆ ಎಂಬುದನ್ನು ನಾನು ಕೇಳುತ್ತೇನೆ ?

ಅಧ್ಯಕ್ಷರು.—ನೀವಿಬ್ಬರೂ ಕುಳಿತುಕೊಳ್ಳಿ. first of all you have not taken my permission. ನೀವು ಏನು ಮಾತನಾಡಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಪಟವಂಕ್ಕಿ ರತ್ನಾಕರ್.—ರೆಕಾರ್ಡಿಗೆ ಹೋಗುವ ಪ್ರಶ್ನೆ ಬೇರೆ. ಅಂತಹ ನಿಗೂಢತೆ ಈ ಪ್ರಶ್ನೆಯಲ್ಲಿ ಏನಿದೆ ? ಅಬ್ಕಾರಿ ಸಚಿವರು ಈ ಪ್ರಶ್ನೆಗೆ ಉತ್ತರ ಕೊಡುವುದಕ್ಕೆ ಏನು ತೊಂದರೆ ಇದೆ ?

ಶ್ರೀ ಪಟವಂಕ್ಕಿ ರತ್ನಾಕರ್.—ತೊಂದರೆ ಏನು ಇದೆ ಅದನ್ನಾದರೂ ಹೇಳಲಿ

ಅಧ್ಯಕ್ಷರು.- ಉತ್ತರ ಬಂದಿದೆಯೇ ?

ಶ್ರೀ ಡಿ. ಬಿ. ಇನಾಂದಾರ್.—ಇಲ್ಲ

ಶ್ರೀ ಪಟವಂಕ್ಕಿ ರತ್ನಾಕರ್.—ಯಾವ ಕಾರಣಕೋಸ್ಕರ ಉತ್ತರವನ್ನು ಕೊಡುವುದಕ್ಕಾಗುವುದಿಲ್ಲ ಎಂಬುದನ್ನು ಸದನದ ಮುಂದೆ ಹೇಳಲಿ.

ಅಧ್ಯಕ್ಷರು. —ಏಕೆ ಉತ್ತರ ಬಂದಿಲ್ಲ ?

ಶ್ರೀ ಡಿ. ಬಿ. ಇನಾಂದಾರ್.—ಅವರು ಕೇಳಿರುವಂತಹ ಪ್ರಶ್ನೆ ನನಗೆ ಅರ್ಥವಾಗಲಿಲ್ಲ.

ಅಧ್ಯಕ್ಷರು.—ಏಕೆ ಉತ್ತರ ಕೊಡುವುದಕ್ಕಾಗಲಿಲ್ಲ ಎಂಬುದನ್ನು ಹೇಳಿ ?

ಶ್ರೀ ಡಿ. ಬಿ. ಇನಾಂದಾರ್.—ಅವರು ಕೇಳಿದಂತಹ ಪ್ರಶ್ನೆ ನನಗೇ ಅರ್ಥವಾಗಲಿಲ್ಲ, ಅವರ ಮೊದಲನೆ ಪ್ರಶ್ನೆಗೆ ನಾನು ಉತ್ತರವನ್ನುಕೊಡಬಹುದು. ಅವರ ಎರಡನೆ ಪ್ರಶ್ನೆ ಏನು ಇದೆ ಎಂದರೆ.—

" ರಾಜ್ಯದಲ್ಲಿ ಅಬ್ಕಾರಿ ಮಾರಾಟ ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಎಂದು ಕೇಳಿದ್ದಾರೆ. ಇದು ನನಗೆ ಅರ್ಥವಾಗಲಿಲ್ಲ,

ಅಧ್ಯಕ್ಷರು.—ಆಯಿತು. ಅವರು ಟೈಮ್ ಕೇಳಿದ್ದಾರೆ. ನಾನು ಟೈಮನ್ನು ಕೊಟ್ಟಿದ್ದೇನೆ. ಅಧ್ಯಕ್ಷರು ನೀವು ಟೈಮ್ ಕೇಳಿದ್ದೀರೋ ಇಲ್ಲವೋ ?

SRI D. B. INAMDAR.—I have only asked that it may be withheld as in the second question he has asked has it come to the notice of the Government that excise is being sold in the State".

ಅಧ್ಯಕ್ಷರು.—ಮಾನ್ಯ ಲಕ್ಕಪ್ಪನವರೇ, ತಾವು ತಮ್ಮ ಪ್ರಶ್ನೆ ಕೇಳಿ.

ಶ್ರೀ ಬಿ. ಆರ್. ನೀಲಕಂಠಪ್ಪ.—ಅಧ್ಯಕ್ಷರೇ ಮಾನ್ಯ ಮಂತ್ರಿಗಳು...

(ಗೊಂದಲ)

ಅಧ್ಯಕ್ಷರು. —ನಿಮಗೆ ಮಾತನಾಡಲು ನಾನು ಅವಕಾಶ ಕೊಟ್ಟಿಲ್ಲ. It will not go into record. ಯಾರು ಏನೇ ಹೇಳಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ

(ಗೊಂದಲ)

ಇವತ್ತು ಉತ್ತರ ಇಲ್ಲ, ಉತ್ತರ ಬೇಕಿದ್ದರೆ ಮತ್ತೊಂದು ದಿವಸ ಇಡಿಸುತ್ತೇನೆ. ಉತ್ತರ ತರಿಸುತ್ತೇನೆ

(ಗೊಂದಲ)

MR. SPEAKER.—He has asked for withholding the question. I withhold it.

(Interruption)

ಮಾನ್ಯ ನೀಲಕಂಠಪ್ಪನವರೇ, ಎಷ್ಟು ಸಾರಿ ನಿಮಗೆ ಹೇಳಬೇಕು?

(ಗೊಂದಲ)

ಈ ರೀತಿ ತಾವು ಮಾಡಿದರೆ I will have to take action against you

ಮಾನ್ಯ ಲಕ್ಕಪ್ಪನವರೇ ತಾವು ತಮ್ಮ ಪ್ರಶ್ನೆಯನ್ನು ಕೇಳಿ ?

ಸರ್ಕಾರಿ ನ್ಯಾಯಬೆಲೆ ಅಂಗಡಿಗಳನ್ನು ಪ್ರಾರಂಭಿಸುವ ಬಗ್ಗೆ

೬೨೬. ಶ್ರೀ ಬಿ. ಲಕ್ಕಪ್ಪ(ಚಿಕ್ಕನಾಯಕನಹಳ್ಳಿ).–ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಖಾಸಗಿ ನ್ಯಾಯಬೆಲೆ ಅಂಗಡಿಗಳನ್ನು ರದ್ದು ಮಾಡಿ ಸರ್ಕಾರಿ ನ್ಯಾಯಬೆಲೆ ಅಂಗಡಿಗಳ ಮೂಲಕ ಸಾರ್ವಜನಿಕರಿಗೆ ಅವಶ್ಯ ವಸ್ತುಗಳನ್ನು ವಿತರಣೆ ಮಾಡುತ್ತೇವೆಂದು ಸರ್ಕಾರದವರು ಭರವಸೆ ಕೊಟ್ಟಿರುವುದು ನಿಜವೆ ?

ಆ) ಖಾಸಗಿ ವ್ಯಕ್ತಿಗಳು ನ್ಯಾಯಬೆಲೆ ಅಂಗಡಿ ಮತ್ತು ಬಳಕೆದಾರರ ಸಹಕಾರ ಸಂಘಗಳೆಂದು ಮಾಡಿಕೊಂಡು ಸರ್ಕಾರ ನೀಡುತ್ತಿರುವ ಅವಶ್ಯ ವಸ್ತುಗಳನ್ನು ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಸರ್ಕಾರವು ನೀಡಿರುವ ಭರವಸೆಯಂತೆ ಎಲ್ಲಾ ಖಾಸಗಿ ನ್ಯಾಯಬೆಲೆ ಅಂಗಡಿಗಳನ್ನು ಮತ್ತು ಖಾಸಗಿ ಬಳಕೆದಾರರ ಸಹಕಾರಿ ಸಂಘಗಳನ್ನು ರದ್ದು ಮಾಡಿ ಅದರ ಜಾಗದಲ್ಲಿ ಸರ್ಕಾರದ ನ್ಯಾಯಬೆಲೆ ಅಂಗಡಿಗಳನ್ನು ತೆರೆಯುವುದಕ್ಕೆ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಈ) ಖಾಸಗಿ ನ್ಯಾಯಬೆಲೆ ಅಂಗಡಿಯವರು ಮಾಡಿರುವ ಅವ್ಯವಹಾರಗಳ ಪ್ರಕರಣಗಳನ್ನು ದಾಖಲು ಮಾಡಲಾಗಿರುವ ಮೊಕದ್ದಮೆಗಳ ಸಂಖ್ಯೆ ಎಷ್ಟು? ಅವ್ಯವಹಾರಗಳಲ್ಲಿ ತೊಡಗಿದ್ದ ನ್ಯಾಯಬೆಲೆ ಅಂಗಡಿಗಳನ್ನು ರದ್ದು ಮಾಡಲಾಗಿರುವ ಸಂಖ್ಯೆ ಎಷ್ಟು? ದಂಡದ ರೂಪದಲ್ಲಿ ವಸೂಲಿ ಮಾಡಲಾಗಿರುವ ಹಣ ಎಷ್ಟು ?

ಉ) ಬೆಂಗಳೂರು ನಗರದಲ್ಲಿ ಈಗಾಗಲೇ ತೆರೆಯಲಾಗಿರುವ ಸರ್ಕಾರಿ ನ್ಯಾಯಬೆಲೆ ಅಂಗಡಿಗಳ ಸಂಖ್ಯೆ ಎಷ್ಟು ? ಇನ್ನು ಉಳಿದಿರುವ ಖಾಸಗಿ ನ್ಯಾಯಬೆಲೆ ಅಂಗಡಿಗಳನ್ನು ರದ್ದು ಮಾಡಿ ಅದರ ಬದಲಿಗೆ ಸರ್ಕಾರಿ ನ್ಯಾಯಬೆಲೆ ಅಂಗಡಿಗಳನ್ನು ಯಾವಾಗ ತೆರೆಯಲಾಗುವುದು ?

ಶ್ರೀ ಬಸವರಾಜ ಪಾಟೀಲ್ ಅನ್ವರಿ (ಆಹಾರ ಮತ್ತು ನಾಗರೀಕ ಮಂತ್ರಿಗಳು).—

ಅ) ನಗರ ಪ್ರದೇಶದಲ್ಲಿರುವ ಖಾಸಗಿ ನ್ಯಾಯಬೆಲೆ ಅಂಗಡಿಗಳನ್ನು ಹಂತ ಹಂತವಾಗಿ ರದ್ದು ಪಡಿಸುವುದಾಗಿ ಭರವಸೆ ಕೊಟ್ಟಿರುವುದು ನಿಜ.

ಆ) ಕೆಲವು ಸಂದರ್ಭಗಳಲ್ಲಿ ಗಮನಕ್ಕೆ ಬಂದಿದೆ.

ಇ) ನಗರ ಪ್ರದೇಶಗಳಲ್ಲಿ ಮಾತ್ರ ಖಾಸಗಿ ನ್ಯಾಯಬೆಲೆ ಅಂಗಡಿಗಳನ್ನು ರದ್ದುಮಾಡಿ, ಆ ಜಾಗದಲ್ಲಿ ಕಾರ್ಡುದಾರರ ಸಹಕಾರ ಸಂಘಗಳಿಗೆ (ಮೊದಲನೇ ಆದ್ಯತೆ ಮೇರೆಗೆ) ಅಥವಾ ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತದ ಅಂಗಡಿ ಯನ್ನು ತೆರೆಯುವಂತೆ ಸೂಚಿಸುವ ಸುತ್ತೋಲೆ ಎಫ್‌ಟಿಡಿ ೩೫ ಡಿಆರ್‌ಎ ೮೪ ಬೆಂಗಳೂರು ದಿನಾಂಕ ೧೫-೮-೮೬ನ್ನು ಹೊರಡಿಸಿ ಅದರಂತೆ ಕ್ರಮ ಕೈಗೊಳ್ಳಲಾಗುತ್ತಿದೆ.

ಈ) ದಾಖಲಾದ ಮೊಕದ್ದಮೆಗಳ ಸಂಖ್ಯೆ ೯೩೫, ರದ್ದು ಮಾಡಿದ ನ್ಯಾಯಬೆಲೆ ಅಂಗಡಿಗಳ ಸಂಖ್ಯೆ ೩೫೫, ವಸೂಲಿ ಮಾಡಿದ ದಂಡ ರೂ. ೧,೩೧,೧೪೮-೫೧

ಉ) ಬೆಂಗಳೂರಿನಲ್ಲಿ ಒಟ್ಟು ೨೩೫ ಅಂಗಡಿಗಳನ್ನು ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮದಿಂದ ತೆರೆಯಿಸಲ್ಪಟ್ಟಿವೆ, ಹಂತ ಹಂತವಾಗಿ ಇನ್ನುಳಿದ ಖಾಸಗಿ ನ್ಯಾಯಬೆಲೆ ಅಂಗಡಿಗಳನ್ನು ಅವ್ಯವಹಾರಗಳು ಕಂಡು ಬಂದಲ್ಲಿ ರದ್ದುಗೊಳಿಸಲಾಗುವುದು.

ಶ್ರೀ ಬಿ. ಲಕ್ಕಪ್ಪ —ಅಧ್ಯಕ್ಷರೇ, ನಮ್ಮ ರಾಜ್ಯದಲ್ಲಿ ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿರತಕ್ಕ ನ್ಯಾಯಬೆಲೆ ಅಂಗಡಿಗಳು ಇವತ್ತು ಅನ್ಯಾಯ ಬೆಲೆ ಅಂಗಡಿಗಳಾಗಿ ನಡೆಯುತ್ತಿವೆ, ಈ ನ್ಯಾಯಬೆಲೆ ಅಂಗಡಿಗಳು ಆಹಾರ ಪದಾರ್ಥಗಳನ್ನು ನೇರವಾಗಿ ಗ್ರಾಹಕರಿಗೆ ತಲುಪಿಸತಕ್ಕ ಕೆಲಸ ಮಾಡದೇ, ಒಬ್ಬ